ಜಿಲ್ಲಾಧಿಕಾರಿಗಳ ಕಾರ್ಯಾಲಯ, ಹಾವೇರಿ, -581110
OFFICE OF THE DEPUTY COMMISSIONER, HAVERI, 581110
Email: dco.haveri@gmail.com
ದೂರವಾಣಿ / Telephone : 08375-249044,249015
: (Fax) 08375-249088/19.

ನಂ:ಎಲ್ ಎನ್ ಎ/ಸಿಆರ್-97/ 2010-11.

ದಿನಾಂಕ: ೯-12-2010.

## ಅನುಬಂಧ-5

## ಅಧಿಕೃತ ಜ್ಞಾಪನ

ವಿಷಯ:- ಹಾವೇರಿ ಜಿಲ್ಲೆ ರಾಣೇಬೆನ್ನೂರು ಪಟ್ಟಣದ ರಿಸನಂ.621/2 ಕ್ಷೇತ್ರ 5ಎ-12ಗುಂಟೆ ಮತ್ತು ರಿಸನಂ.621/3 ಕ್ಷೇತ್ರ 0ಎ-28ಗುಂಟೆ, ಒಟ್ಟು 6ಎ-00ಗುಂಟೆ ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ ಶೈಕ್ಷಣಿಕ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಅಧ್ಯಕ್ಷರು, ಕೆ.ವಿ.ಎಜ್ಯುಕೇಶನ್ ಸೊಸೈಟಿ (ರಿ) ರಾಣೇಬೆನ್ನೂರು ಇವರು ಸಲ್ಲಿಸಿರುವ ಅರ್ಜಿ ದಿನಾಂಕ: 3-11-2010.

ಉಲ್ಲೇಖ:- 1. ತಹಶೀಲ್ದಾರ, ರಾಣೇಬೆನ್ನೂರು ಇವರ ವರದಿ ಸಂ: LNA/CR-33: 2010-11, ದಿನಾಂಕ: 12-11-2010.
2. ಭೂ ಪರಿವರ್ತನಾ ಶುಲ್ಕ ರೂ.2,61,360-00, ಫೋಡಿ ಶುಲ್ಕ ರೂ. 70-00, ಒಟ್ಟು ರೂ.2,61,430-00ಗಳನ್ನು ಡಿ.ಡಿ. ಚಲನ್ ನಂ.52, ದಿ: 6-12-2010ರಂದು ಖಜಾನೆಗೆ ಅರ್ಜಿದಾರರು ಜಮಾ ಮಾಡಿರುತ್ತಾರೆ.

****

ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 95(2), 95(4) ಮತ್ತು 95(7)ರ ಶರತ್ತುಗಳು ಹಾಗೂ ಈ ಕೆಳಕಂಡ ಶರತ್ತುಗಳಿಗೆ ಒಳಪಡಿಸಿ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ನಿಯಮಗಳು 1994ರ ನಿಯಮ 107(1) ರಂತೆ ಅರ್ಜಿದಾರರು ಉಲ್ಲೇಖ-2ರಲ್ಲಿ ನಮೂದಿಸಿರುವಂತೆ ಹಣವನ್ನು ಜಮಾ ಮಾಡಿದ ಮೇರೆಗೆ ಅರ್ಜಿದಾರರಾದ ಅಧ್ಯಕ್ಷರು, ಕೆ.ವಿ.ಎಜ್ಯುಕೇಶನ್ ಸೊಸೈಟಿ (ರಿ) ರಾಣೇಬೆನ್ನೂರು ರವರ ಅರ್ಜಿಯನ್ನು ಪರಿಗಣಿಸಿ ಹಾವೇರಿ ಜಿಲ್ಲೆ ರಾಣೇಬೆನ್ನೂರು ಪಟ್ಟಣದ ರಿಸನಂ.621/2 ಕ್ಷೇತ್ರ 5ಎ-12ಗುಂಟೆ ಮತ್ತು ರಿಸನಂ.621/3 ಕ್ಷೇತ್ರ 0ಎ-28ಗುಂಟೆ, ಒಟ್ಟು 6ಎ-00ಗುಂಟೆ ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ ಶೈಕ್ಷಣಿಕ ಉದ್ದೇಶಕ್ಕಾಗಿ ಬಳಸಲು ಈ ಕೆಳಕಂಡ ಶರತ್ತುಗಳಿಗೆ ಒಳಪಟ್ಟು ಭೂ ಪರಿವರ್ತನಾ ಆದೇಶವನ್ನು ಹೊರಡಿಸಲಾಗಿದೆ.

1. ಈ ಭೂಮಿಯು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕೆ ಉಪಯೋಗಿಸಿಕೊಳ್ಳಲು ಸಕ್ಷಮ ಪ್ರಾಧಿಕಾರದಿಂದ ಅಂದರೆ /ಅಭಿವೃದ್ಧಿ ಮಂಡಳಿ / ಸಿ.ಎಂ.ಸಿ / ಟಿ.ಎಂ.ಸಿ./ ಮಾಲಿನ್ಯ ನಿಯಂತ್ರಣ ಮಂಡಳಿ / ಗ್ರಾಮ ಪಂಚಾಯತಿಗಳಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದಾರನಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ.
2. ಈ ಭೂ ಪರಿವರ್ತಿತ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೇ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.
3. ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಿಗೆ ಇತ್ಯಾದಿಗಳನ್ನು ಸದಸ್ಯ ಕಾರ್ಯದರ್ಶಿ, ನಗರ ಯೋಜನಾ ಪ್ರಾಧಿಕಾರ, ರಾಣೇಬೆನ್ನೂರು ( ಪ್ರಾಧಿಕಾರ / ನಗರ ಪಾಲಿಕೆ / ಇತ್ಯಾದಿ ) ರವರಿಂದ ಅನುಮೋದಿಸಿಕೊಂಡು ಆ ನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟುವುದು. ಸದರಿ ಜಮೀನಿನಲ್ಲಿ ಲೇಔಟ್ ಪ್ಲಾನಿಗೆ ಅನುಮೋದನೆ ಪಡೆಯದೇ ಪರಭಾರೆ ಮಾಡಕೂಡದು.
4. ಇತರ ಅವಶ್ಯವಾದ ರಸ್ತೆ ಹಾಗೂ ರಸ್ತೆ ಮಾರ್ಜಿನ್, ಖಾಲಿ ಜಾಗ ಇತ್ಯಾದಿಗಳನ್ನು ಸದಸ್ಯ ಕಾರ್ಯದರ್ಶಿ, ನಗರ ಯೋಜನಾ ಪ್ರಾಧಿಕಾರ, ರಾಣೇಬೆನ್ನೂರು ( ಪ್ರಾಧಿಕಾರ , ನಗರಪಾಲಿಕೆ/ ಇತ್ಯಾದಿ) ರವರಿಂದ ಅನುಮೋದಿಸಿದ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟಪಡಿಸಿದ ನಿಯಮಗಳ ರೀತ್ಯಾ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.
5. ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನಲ್ಲಿನ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ , ನೀರು ಸರಬರಾಜು, ಒಳ ಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲೀಕರಣ ಹಾಗೂ ಭದ್ರತೆ ಉದ್ದೇಶದಿಂದ ಎಲ್ಲಾ ಸೌಲಭ್ಯದಿಂದ ಕಾನೂನು ರೀತ್ಯ ಒದಗಿಸಿಕೊಡುವುದು ಅರ್ಜಿದಾರರ

6. ಈ ಜಮೀನಿಗೆ ತಾಕು ಪೋಟ್ ಖರಾಬ್ ಜಮೀನು ಇದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 67 ರಂತೆ ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು. ಹಾಗೂ ಪ್ರಸ್ತುತ ಭೂ ಪರಿವರ್ತನೆಗೆ ಒಳಪಟ್ಟಿರುವ ಸರ್ವೆ ನಂಬರ ------- ರಲ್ಲಿನ 'ಎ' ಖರಾಬ್ ವಿಸ್ತೀರ್ಣ --------ಕ್ಕೆ ಮಾರುಕಟ್ಟೆ ದರ ಮತ್ತು ಭೂ ಪರಿವರ್ತನಾ ಶುಲ್ಕ ರೂ. ---------- ಪಾವತಿಸಿಕೊಳ್ಳಲಾಗಿದ್ದು, ಶೈಕ್ಷಣಿಕ ಉದ್ದೇಶಕ್ಕಾಗಿ ಬಳಸಲು ಭೂ ಪರಿವರ್ತನೆ ನೀಡಿದೆ. ಹಾಗೂ --------- ವಿಸ್ತೀರ್ಣ 'ಬಿ' ಖರಾಬಿನಲ್ಲಿ ಬರುವ ಕಾರಣ ಇದನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿರಿಸಲಾಗಿದೆ. ಈ ವಿಸ್ತೀರ್ಣದ ಮೇಲೆ ಅರ್ಜಿದಾರರಿಗೆ ಯಾವುದೇ ಹಕ್ಕು ಇರುವುದಿಲ್ಲ. ಈ 'ಬಿ' ಖರಾಬಿನ ವಿಸ್ತೀರ್ಣದ ಹಕ್ಕು ಯಾವಾಗಲೂ ಸರ್ಕಾರಕ್ಕೆ ಸೇರಿರುತ್ತದೆ. ತಹಶೀಲ್ದಾರರವರು ಈ ಬಾಬ್ತು ಆರ್.ಟಿ.ಸಿ. ಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.
7. ಸರ್ಕಾರದ ಆದೇಶ ಸಂಖ್ಯೆ: ಪಿ.ಡಬ್ಲ್ಯೂಡಿ 7556-665-ಆರ್ ಮತ್ತು ಬಿ-554-5 ಮತ್ತು ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯ ಪತ್ರದ ನಂಬರ : ಪಿ1:7(11) 67 ದಿನಾಂಕ: 1-1-1965 ರಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯ ಭಾಗದಿಂದ 25 ಮೀಟರಗಳ ಅಂತರವನ್ನು ಕಾಯ್ದಿರಿಸಬೇಕು. ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.
8. ಅರ್ಜಿದಾರರು ನಗರ ಭೂ ಪರಿಮಿತಿ ಕಾಯ್ದೆ 1976 ವಿಧಿ 6(1)ರ ಪ್ರಕಾರ ಸಕ್ಷಮ ಪ್ರಾಧಿಕಾರದಲ್ಲಿ ಘೋಷಣೆ ಪತ್ರವನ್ನು ಸಲ್ಲಿಸದಿದ್ದಲ್ಲಿ ಈಗ ತಕ್ಷಣ ಅಂತಹ ಘೋಷಣೆ ಪತ್ರವನ್ನು ಸಲ್ಲಿಸತಕ್ಕದ್ದು. ಮತ್ತು ಈ ಆದೇಶದ ಪ್ರತಿಯನ್ನು ಸಂಬಂಧಪಟ್ಟ ಭೂ ಪರಿಮಿತಿ ಪ್ರಾಧಿಕಾರಕ್ಕೆ ಕಳುಹಿಸಲಾಗಿದೆ.
9. ಈ ಭೂ ಪರಿವರ್ತನಾ ಜಮೀನಿನಲ್ಲಿ ಸ್ಥಾಪಿಸಲಾಗುವ ಕೈಗಾರಿಕಾ ಘಟಕಗಳು ಹೊರದೂಡುವ ಹೊಗೆ, ಅನಿಲ ಇತರೆ ಕಲ್ಮಶಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ಹಾಗೂ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳತಕ್ಕದ್ದು. ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತಿತಾ ಜಮೀನಿನಲ್ಲಿ ಸ್ಥಾಪಿಸುವ ಕೈಗಾರಿಕಾ ಘಟಕಗಳು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ / ಪರಿಸರ ಇಲಾಖೆಗಳ ಅನುಮತಿ ಹೊಂದಿರತಕ್ಕದ್ದು.
10. ಮೇಲ್ಕಂಡ ಯಾವುದೇ ಶರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಪರಿವರ್ತನೆ ಆದೇಶ ಯಾವುದೇ ಸೂಚನೆ ನೀಡದೇ ರದ್ದುಗೊಳಿಸಲಾಗುವುದು. ಮತ್ತು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 96 ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೇ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೇ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು. ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಖಾತೆದಾರರಿಂದ ವಸೂಲಿ ಮಾಡಲಾಗುವುದು.

<u>ಷೆಡ್ಯೂಲ್ ವಿವರ</u>

ಹಾವೇರಿ ಜಿಲ್ಲೆ ರಾಣೇಬೆನ್ನೂರು ಪಟ್ಟಣದ ರಿಸನಂ.621/2 ಕ್ಷೇತ್ರ 5ಎ-12ಗುಂಟೆ ಮತ್ತು ರಿಸನಂ.621/3 ಕ್ಷೇತ್ರ 0ಎ-28ಗುಂಟೆ, ಒಟ್ಟು 6ಎ-00ಗುಂಟೆ ವಿಸ್ತೀರ್ಣದ ಭೂಪರಿವರ್ತಿತ ಜಮೀನಿಗೆ ಚೆಕ್ಕಬಂದಿ

<u>ರಿಸನಂ.621/2 ರ ಚೆಕ್ಕಬಂದಿ</u>

| | |
|---|---|
| ಪೂರ್ವಕ್ಕೆ | : ರಿ.ಸ.ನಂ. 622 ರ ಜಮೀನು. |
| ಪಶ್ಚಿಮಕ್ಕೆ | : ರಿ.ಸ.ನಂ.621/1 ರ ಜಮೀನು |
| ಉತ್ತರಕ್ಕೆ | : ರಿ.ಸ.ನಂ. 620 ರ ಜಮೀನು. |
| ದಕ್ಷಿಣಕ್ಕೆ | : ರಿ.ಸ.ನಂ. 621/3 ರ ಜಮೀನು |

<u>ರಿಸನಂ.621/3 ರ ಚೆಕ್ಕಬಂದಿ</u>

| | |
|---|---|
| ಪೂರ್ವಕ್ಕೆ | : ರಿ.ಸ.ನಂ. 622 ರ ಜಮೀನು. |
| ಪಶ್ಚಿಮಕ್ಕೆ | : ರಿ.ಸ.ನಂ.620 ರ ಜಮೀನು |
| ಉತ್ತರಕ್ಕೆ | : ರಿ.ಸ.ನಂ. 621/1, 2 ರ ಜಮೀನು. |
| ದಕ್ಷಿಣಕ್ಕೆ | : ರಿ.ಸ.ನಂ. 782, 778 ರ ಜಮೀನು |

H. G. Srivara 9.12.10

(ಹೆಚ್.ಜಿ.ಶ್ರೀವರ)
ಜಿಲ್ಲಾಧಿಕಾರಿಗಳು, ಹಾವೇರಿ.

<u>ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಿ ಕೊಡಲಾಗಿದೆ.</u>

1. ತಹಶೀಲ್ದಾರ ರಾಣೇಬೆನ್ನೂರು ಮೂಲ ಕಡತ ಹಾಗೂ ಚಲನ್ ದೊಂದಿಗೆ ಕಳುಹಿಸುತ್ತಾ, ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆ ನಂ. ಭೂ ಪರಿವರ್ತನೆಯಾಗಿದೆ ಎಂದು ಸಂಬಂಧಪಟ್ಟ ಆರ್.ಟಿ.ಸಿ.ಯಲ್ಲಿ ನಮೂದಿಸತಕ್ಕದ್ದು. ಮತ್ತು ಈ ಜಮೀನಿಗೆ ಖಾತೆದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂಕಂದಾಯವನ್ನು ಕಡಿಮೆಗೊಳಿಸಲಾಗುವುದು.
2. ಸದಸ್ಯ ಕಾರ್ಯದರ್ಶಿ, ನಗರ ಯೋಜನಾ ಪ್ರಾಧಿಕಾರ, ರಾಣೇಬೆನ್ನೂರು ಇವರಿಗೆ ಮುಂದಿನ ಸೂಕ್ತ ಕ್ರಮಕ್ಕೆ.
3. ಉಪ ವಿಭಾಗಾಧಿಕಾರಿಗಳು, ಹಾವೇರಿ ಉಪ ವಿಭಾಗ ಹಾವೇರಿ
4. ಅರ್ಜಿದಾರರಾದ ಅಧ್ಯಕ್ಷರು, ಕೆ.ವಿ.ಎಜ್ಯುಕೇಶನ್ ಸೊಸೈಟ (ರಿ) ರಾಣೇಬೆನ್ನೂರು ಇವರಿಗೆ ಧೃಢೀಕೃತ ಅಂಚೆ ಮೂಲಕ.

ಅಪರ ಜಿಲ್ಲಾಧಿಕಾರಿಗಳು

(1)

ಆವಕ ಸ್ವೀಕೃತಿ ಶಾಖೆ
ತಹಶೀಲ್ದಾರ ರಾಣೆಬೆನ್ನೂರ
...ರಗೆ ಅಮುಮತಿ

ಕರ್ನಾಟಕ ಸರ್ಕಾರ

ಕ್ರ: ಭೂಸು/ವಹಿ 7/2010-11

ತಹಶೀಲದಾರ ಕಾರ್ಯಾಲಯ
ರಾಣೆಬೆನ್ನೂರ, ದಿನಾಂಕ:28 -6-2010

ಗೆ,
ಮಾನ್ಯ ಉಪವಿಭಾಗಾಧಿಕಾರಿಗಳು
ಹಾವೇರಿ.

ಮಾನ್ಯರೇ,

ವಿಷಯ:- ಕರ್ನಾಟಕ ಭೂಸುಧಾರಣೆ ಕಾಯ್ದೆ ಕಲಂ 109 ರಡಿಯಲ್ಲಿ ಕೃಷಿ ಜಮೀನು ಖರೀದಿಸಲು ವಿನಾಯಿತಿ ನೀಡುವ ಬಗ್ಗೆ.
ಉಲ್ಲೇಖ:- ಮಾನ್ಯ ಜಿಲ್ಲಾಧಿಕಾರಿಗಳು ಹಾವೇರಿ ಇವರ ಪತ್ರ ಕ್ರ:ಭೂಸು(109) ಸಿಆರ್ 12/2010-11 ದಿನಾಂಕ: 21-6-2010.

***

ಮೇಲ್ಕಾಣಿಸಿದ ವಿಷಯದ ಸಂಬಂಧ ಅಧ್ಯಕ್ಷರು, ಕೆ.ವಿ.ಎಜ್ಯುಕೇಶನ್ ಸೂಸೈಟಿ(ರಿ) ಯಲ್ಲಾಪುರ ತರ್ಫೆ ಹೊನ್ನತ್ತಿ ಇವರು ಶೈಕ್ಷಣಿಕ ಉದ್ದೇಶಕ್ಕಾಗಿ ರಾಣೆಬೆನ್ನೂರ ಗ್ರಾಮದ ರಿಸನಂ.621 ಕ್ಷೇತ್ರ 8ಎ-15ಗುಂ. ಪೈಕಿ 6ಎ-00ಗುಂ. ಕೃಷಿ ಜಮೀನನ್ನು ಖರೀದಿಸಲು ಕರ್ನಾಟಕ ಭೂಸುಧಾರಣೆ ಕಾಯ್ದೆ ಕಲಂ 109 ರಡಿಯಲ್ಲಿ ಅನುಮತಿ ನೀಡಲು ವಿನಂತಿಸಿಕೊಂಡಿದ್ದಾರೆ.

ಅರ್ಜಿದಾರರ ಮನವಿಯ ಬಗ್ಗೆ ಕಂದಾಯ ನಿರೀಕ್ಷಕರು ರಾಣೆಬೆನ್ನೂರ ಇವರು ಸ್ಥಾನಿಕ ಚೌಕಸಿಯಿಂದ ವರದಿ ಸಲ್ಲಿಸಿದ್ದು ಪುಟಸಂಖ್ಯೆ ೮೯ ಕ್ಕೆ ಲಗ್ತಪಡಿಸಿದೆ.

ಸದರಿಯವರ ವರದಿಯಂತೆ ಮಾನ್ಯ ಜಿಲ್ಲಾಧಿಕಾರಿಗಳು ಹಾವೇರಿ ಇವರು ನೀಡಿದ ಅಂಶಗಳಿಗೆ ಈ ಕೆಳಗಿನಂತೆ ವರದಿ ಸಲ್ಲಿಸಿದೆ.

ಉಪ ವಿಭಾಗಾಧಿಕಾರಿಗಳ ಕಛೇರಿ
ಹಾವೇರಿ.
1059
30 JUN 2010
ಸಂಕಲನ : HGLR
ಜ.ಆರ್.ಆರ್ ಸಂ.

1) ಖರೀದಿಸಲು ಉದ್ದೇಶಿಸಿರುವ ಜಮೀನು ಮಾಲ್ಕಿ ಇದ್ದು ರೈತಾಪಿ ಇನಾಂ ಜಮೀನು ಆಗಿರುವುದಿಲ್ಲ.
2) ಸದರಿ ಜಮೀನು ಮಾರಾಟದಿಂದ ಪಿ.ಟಿ.ಸಿ.ಎಲ್ ಕಾಯ್ದೆ ಉಲ್ಲಂಘನೆ ಆಗುವುದಿಲ್ಲ.
3) ಸದರಿ ಜಮೀನಿಗೆ ರಸ್ತೆ ಸಂಪರ್ಕ ಇರುತ್ತದೆ.
4) ಸದರಿ ಜಮೀನು ಗ್ರಾಮದ ಹೊರ ವಲಯದಲ್ಲಿದ್ದು ಗ್ರಾಮದಿಂದ ಸುಮಾರು 1 ಕಿ.ಮೀ ಅಂತರದಲ್ಲಿದೆ ಹಾಗೂ ರಾಷ್ಟ್ರೀಯ ಹೆದ್ದಾರಿಯಿಂದ 3 ಕಿ.ಮೀ ಅಂತರದಲ್ಲಿದೆ.
5) ಸದರಿ ಸಂಸ್ಥೆಯ ವತಿಯಿಂದ ಈಗಾಗಲೇ ರಾಣೆಬೆನ್ನೂರ ಗ್ರಾಮದಲ್ಲಿ ಬಾಡಿಗೆ ಕಟ್ಟಡದಲ್ಲಿ ಪಿ:ಟಿ.ಖ ಕಾಲೇಜ್ ನಡೆಸುತ್ತಿದ್ದು ಶಾಲಾ ಕಟ್ಟಡ, ಆಟದ ಮೈದಾನ ಹಾಗೂ ಉದ್ಯಾನವನಕ್ಕಾಗಿ 6ಎ-00ಗುಂ. ಜಮೀನು ಅವಶ್ಯಕತೆ ಇರುವುದಾಗಿ ಅರ್ಜಿದಾರರು ತಮ್ಮ ಹೇಳಿಕೆಯಲ್ಲಿ ತಿಳಿಸಿರುತ್ತಾರೆ. ಕಾರಣ, ಸದರಿ ಸಂಸ್ಥೆಗೆ ಪ್ರಸ್ತಾವನೆಯಲ್ಲಿ ವಿನಂತಿಸಿದ ಉದ್ದೇಶಕ್ಕೆ ಪೂರ್ಣ ಕ್ಷೇತ್ರದ ಅವಶ್ಯಕತೆ ಇರುವುದು ಕಂಡುಬರುತ್ತದೆ.
6) ಚೆಕ್‌ಲಿಸ್ಟ್ ಹಾಗೂ ನಮೂನೆ-15ಎಎ ರಲ್ಲಿಯ ಪ್ರತಿ ಅಂಕಣಗಳಿಗೆ ಸಂಬಂಧಿಸಿದಂತೆ ಸೂಕ್ತ ವಿವರಣೆ ಹಾಗೂ ದಾಖಲೆಗಳನ್ನು ಅರ್ಜಿದಾರರಿಂದ ಪಡೆಯಲಾಗಿರುತ್ತದೆ.
7) ಪ್ರಸ್ತಾಪಿತ ಜಮೀನು ಖರೀದಿಸುವ ಬಗ್ಗೆ ಅಕ್ಕಪಕ್ಕದ ಜಮೀನುಗಳ ರೈತರ/ಸಾರ್ವಜನಿಕರ ಅಭಿಪ್ರಾಯ ಪಡೆದುಕೊಂಡಿದೆ. (ಪಂಚಾಯದಸ್ತ ಲಗ್ತಪಡಿಸಿದೆ).
8) ಸದರಿ ಸಂಸ್ಥೆಯು ಈಗಾಗಲೇ 9ಎ-00ಗುಂ. ಕೃಷಿ ಜಮೀನನ್ನು ಹೊಂದಿರುತ್ತದೆ.

ಕಾರಣ, ಅರ್ಜಿದಾರರು ಶೈಕ್ಷಣಿಕ ಉದ್ದೇಶಕ್ಕೆ ಖರೀದಿಸಲು ಇಚ್ಛಿಸಿರುವ ಜಮೀನು ಸೂಕ್ತ ಇರುವುದು ಕಂಡುಬರುವುದರಿಂದ ಪ್ರಸ್ತಾಪಿತ ಜಮೀನನ್ನು ಕರ್ನಾಟಕ ಭೂಸುಧಾರಣೆ ಕಾಯ್ದೆ ಕಲಂ 109 ರಡಿಯಲ್ಲಿ ಅನುಮತಿ ನೀಡುವ ಕುರಿತು ಪ್ರಕರಣ ಪುಟಸಂಖ್ಯೆ 1 ರಿಂದ 113 ರವರೆಗೆ ಸಲ್ಲಿಸಿದೆ.

ತಮ್ಮ ವಿಶ್ವಾಸಿ

28/6/10
ತಹಶೀಲದಾರ ರಾಣೆಬೆನ್ನೂರ.